ಲೊಂದರಲ್ಲಿ 40—50 ರೂಪಾಯಿಗಳವರೆಗೆ ತಿಂದು, ಕುಡಿದು ಬಿಲ್ ಕೊಡುವುದರಲ್ಲಿ ಗಲಾಟೆ ಯಾಗಿದೆ. ಇವನ್ನು ಹಿಡಿಯಲಿಕ್ಕೂ ಸಾಧ್ಯವಾಗಲಿಲ್ಲ. ಆಲ್ಲದೆ ಕೆಲವರು ಇವರನ್ನು ಹಿಡಿದು ಕೊಡುವಾಗ ಅವರ ಮೇಲೆ ಸ್ಪೇರ್ ಮಾಡಿದ್ದಾರೆ. ಇದರಲ್ಲಿ ಡಿ ಮೈ ಎಸ್ ಪಿ ಮಗನೂ ಇದ್ದಾನೆ ಒಂದು ಫರ್ಲಾಂಗ್ ದೂರದಲ್ಲಿ ರಾತ್ರಿಯಲ್ಲಿ ಕೊಲೆಯಾಗಿದ್ದರೂ ಆರೋಪಿಗಳನ್ನು ಹಿಡಿಯಲ್ಲಿಕ್ಕೆ. ಹೋದ ಹತ್ತಾರು ಪುಡುಗರು ಪೋಲೀಸ್ ಸ್ಟೇಷನ್‌ಗೆ ಹೋಗಿ ಹೇಳಿದರೂ ಅವರನ್ನು ಹಿಡಿದಿಲ್ಲ ಆನ್ಯತ್ರೆಯಲ್ಲಿ ಸತ್ತವರನ್ನು ಪೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕಾಗಿತ್ತು. ಆದರೆ ಡಿಮೈಎಸ್‌ಪಿ ಮಗನನ್ನು ಬಿಡುಗಡೆ ಮಾಡಿದ್ದಾರೆಂದು ಮೃತನ ತಂದೆಗೆ ಚಿಂತೆಯಾಗಿದೆ. ಈ ಮಧ್ಯೆ ಡಿ ಮೈ ಎಸ್ ಪಿ ಮಗನನ್ನು ಬಿಡುಗಡೆ ಮಾಡಿ, ಕಥೆ ಎಳೆಯಲ್ಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಇದನ್ನು ಬರೆದರೂ ಆರೋಪಿಗಳ ಮೇಲೆ ಚಾರ್ಜ್ ಫೀಟ್ ಹಾಕಿಲ್ಲ ಮಾನ್ಯ ಮಂತ್ರಿಗಳು ಈಗ ಇದನ್ನು ಇನ್‌ಪೆಸ್ಟಿಗೇಷನ್ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇವರಲ್ಲಿ ದೊಡ್ಡ ದೊಡ್ಡವರ ಮಕ್ಕಳುಗಳನ್ನು, ಉಳಿಸಲಿಕ್ಕೆ ನಾಟಕ ನಡೆದಿದೆ ಎಂದು ನಮಗೆ ಅರ್ಥವಾಗಿದೆ ಆದ್ದರಿಂದ ನಾನು ಈ ಸದನದ ಮುಖಾಂತರ ಪ್ರಾರ್ಥಿಸುವುದು ಏನೆಂದರೆ, ಕೊಲೆಗಾರರು ಯಾರೇ ಇರಲಿ ಅವರಿಗೆ ತಕ್ಕ ಶಿಕ್ಷೆಯಾಗ ಬೇಕು ಸರ್ಕಾರದವರು ಇವನ್ನು ಇರಾಪೆಯ ಪುನರ್ ಆಲೋಚನೆಗೆ ಒಳಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

10-00 ಎ. ಎಂ.

ಶ್ರೀ ಕೆ. ಎಚ್. ಪಾಟೀಲ್ — ಮಾನ್ಯ ಸದಸ್ಯರು ಸಂತಸ ಪಟ್ಟಂತೆ ಯಾವುದೇ ಆಫೀಸರ್ ಆಗಲೀ, ಆಫೀಸರನ ಮಗನಾಗಲೀ ಮತ್ತು ಇನ್ನು ಇತರೆ ಯಾರಾಗಲೀ ಕೊಲೆಗಾರರಾಗಿದ್ದರೆ ಸರ್ಕಾರ ಅವರ ಮೇಲೆ ಯಾವ ದಯೆಯನ್ನು ತೋರಿಸದೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆ ಮಾಡುತ್ತದೆ. ನಮಗೆ ಬಂದ ಮಾಹಿತಿಯ ಆಧಾರದ ಮೇಲೆ ಈಗಾಗಲೇ ಇದರ ಬಗ್ಗೆ ಇನ್ವೆಸ್ಟಿಗೇಷನ್ ನಡೆಯುತ್ತಿದೆ, ಜುಡಿಷಿಯಲ್ ಕನ್ವಿಡಿಗೆ ಕೊಟ್ಟಿದ್ದೇವೆ. ಆದರೂ ಸಹ ಮಾನ್ಯ ಸದಸ್ಯರಾಗಲೀ, ಇತರೆ ಯಾರಾಗಲಿ ಒಳಸಂಚು ಏನಾದರೂ ಇದ್ದರೆ ಅದನ್ನು ಗಮನಕ್ಕೆ ತಂದರೆ, ಸರ್ಕಾರ ನಿರ್ದಯೆಯಿಂದ ಕ್ರಮ ತೆಗೆದುಕೊಳ್ಳುತ್ತದೆ.

(ii) re: *Compensation to persons affected by Chakra and Savehakkalu Project*

SRI KONANDUR LINGAPPA(Thirthahalli).—I beg to call the attention of the Hon. Minister for Revenue to non payment of compensation to persons affected by Chakra and Savehakkalu Project

ಶ್ರೀ ಎನ್ ಹುಚ್ಚಮಾಸ್ತಿ ಗೌಡ — ಅಧ್ಯಕ್ಷಣಿಯವರೇ, ನನ್ನ ಹೆಸರಿನಲ್ಲಿ ಇದು ಜ್ವೆಪ್ ಆಗಿವೆದಕ್ಕೆ ಬದಲಾಗಿ ನಮ್ಮ ಅಂಡರ್ ಸೆಕ್ರಟರಿಯವರ ಹೆಸರಿನಲ್ಲಿದೆ. ತಾವು ಇದಕ್ಕೆ ಅನುಮತಿ ಕೊಟ್ಟರೆ ನಾನು ನಭೆಯಲ್ಲಿ ಓದುತ್ತೇನೆ.

ಅಧ್ಯಕ್ಷರು.— ಅಂಥ ದೊಡ್ಡ ಅಕ್ರಮ ಎಂದು ನಾನು ಭಾವಿಸುವುದಿಲ್ಲ. ಮುಂದೆ ಹೀಗೆ ಆಗದ ಹಾಗೆ ನೋಡಿಕೊಳ್ಳಬೇಕು.

SRI N. HUCHAMASTHY GOWDA.— The Dams on rivers Chakra and Savehakkalu Projects will be built on the Government land whereas some of the lands in submersion will be in private lands. Contsruction of the dam is just commenced and there will be no submersion in the immediate future The land taken from private person(hiduvalidars) for digging channels or water Conductor Systems of Chakra and Savehakkalu project is about 40 and 35 acres respectively. They

have been given crop compensations, for the last two years. The total number of persons that will be ultimately affected by the projects are about 1470. Right now only a few families are affected. To rehabilitate persons who will be affected by these projects a committee has been constituted to assess their requirement of lands, the availability of lands and the mode of rehabilitating these persons. It is proposed to find out the available land under Gomal and wastes in Nagara Hobli of Hosanagar Taluk in other hoblies of Thirthahalli Taluk, which is a neighbouring taluk with more or less similar agro-climatic conditions. The Tahsildars have been asked to assess the available extent of the land. The committee is scheduled to meet in the first or second week of May 1977 to prepare and submit a report to Government. There are some lands which have to be handed over to the Forest Department as per the Government Orders issued in the year 1965 and 1967. If suitable lands are not found elsewhere even this will be considered for grant of displaced persons. For the time being lands are given to 60 persons who are immediately affected. The proposal to given the lands and other facilities to the remaining people will be sent to Government by the Committee.

Some of the affected persons are reported to have offered Satyagrah on 18th April 1977 but on the intervention of the Deputy Commissioner, Shimoga the Satyagraha has been called off on the evening of 20th April 1977. The Deputy Commissioner has promised. them that necessary steps will be taken to rehabilitate the affected families.

ಶ್ರೀ ಕೊಣಂದೂರು ಲಿಂಗಪ್ಪ.— ಸರ್ಕಾರಿ ಭೂಮಿಯಲ್ಲಿ ಚಕ್ರ ಮತ್ತು ಸಾವೆ ಹೊಕ್ಕಲಿ ಯೋಜನೆ ಮಾಡುವುದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ ಇಲ್ಲಿ ಸಣ್ಣ ಹಿಡುವಳಿದಾರರು ಯಾರಿದ್ದಾರೆ. ರೈತರು ಯಾರಿದ್ದಾರೆ ಅವರ ಭೂಮಿಯ ಮೇಲೆ ಚಾನಲ್‌ಗಳನ್ನು ತಗೆದು ಅವರ ಬೆಳೆಯನ್ನು ಸಂಪೂರ್ಣವಾಗಿ ವ್ಯವಸಾಯ ಮಾಡಲಿಕ್ಕೆ ಬರದ ಹಾಗೆ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಕಾಂಪನ್ಸೇಷನ್ ಅನ್ನು ಎರಡು ವರ್ಷದಿಂದ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದು ನೂರಕ್ಕೆ ಸಾವಿರದಷ್ಟು ಸತ್ಯಕ್ಕೆ ದೂರವಾದ ವಿಚಾರ. ಎರಡು ವರ್ಷದ ಬೆಳೆಗೆ ಕಾಂಪ ನ್ಸೇಷನ್ ಕೊಟ್ಟಿಲ್ಲ. ಆದರ ಬದಲು ಏನು ಮಾಡಿದ್ದಾರೆಂದರೆ, ಮುಂದಿನ ವಾಟಗೆ ನಸಿ ಹಾಕುತ್ತಾರೆ. ಅದನ್ನು ತಾವು ನರ್ಸರಿ ಎಂದು ಕರೆಯುತ್ತೀರಿ. ಇದಕ್ಕೆ ಇವರು ಕಾಂಪನ್ಸೇ ಷನ್ ಕೊಟ್ಟಿದ್ದಾರೆ. ಆದೂ ಕೂಡ ಒಂದೇ ಒಂದು ಬೆಳೆಗೆ ಕೊಟ್ಟಿದ್ದಾರೆ. ಇದನ್ನು ತಗೆದು ಬೇರೆ ಗದ್ದಗಳಿಗೆ ಹಾಕಿಬೆಳೆಯುವುದನ್ನು ರೈತರು ಪಡೆಯತಕ್ಕದು ಮೂರು ವರ್ಷದಿಂದ ಅರು ಬೆಳೆ ಭೂಮಿ ಯಲ್ಲಿ ಸಂಪೂರ್ಣವಾಗಿ ಮಣ್ಣು ಮುಚ್ಚಿ ಹೋಗಿದೆ. ಈ ಬಗ್ಗೆ ರೈತರಿಗೆ ತಿಳುವಳಿಕೆ ಕೊಡದೆ ಅನೇಕ ರೀತಿಯಲ್ಲಿ ಅನ್ಯಾಯ ಮಾಡಿದ್ದಾರೆ. ಆದ್ದರಿಂದಲೇ ಅಲ್ಲಿನ ರೈತರು ಸತ್ಯಾಗ್ರಹ ಮಾಡಿದ್ದು. ಸತ್ಯಾಗ್ರಹ ಮಾಡಿದನಂತರ ತಕ್ಷಣ ಪರಿಹಾರವನ್ನು ಒದಗಿಸುತ್ತೇವೆಂದು ಜಿಲ್ಲಾಧಿಕಾರಿಗಳು ಭರವಸೆ ಕೊಟ್ಟಿರುವುದು ನಿಜ.

ಅಲ್ಲಿ ಸುಮಾರು 40—50 ಜನ ಹಿಡುವಳಿದಾರರು ಏನು ಇದ್ದಾರೆ ಅವರಿಗೆ ಜಾಗ ತೋರಿಸಲಿಲ್ಲ ಸ್ಪಷ್ಟವಾದ ಮತ್ತು ಖಚಿತವಾಗಿ ಎಲೆಲ್ಲಿ ಒಳ್ಳೆಯ ಭೂಮಿ ಇದೆ ಎಂಬುದನ್ನು ಹುಡಿಕಿ ಸರ್ಕಾರದ ಗಮನಕ್ಕೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮಂಡಗೆದ್ದೆ ಹತ್ತಿರ ತೋರಿಸಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದನ್ನು ಸರ್ಕಾರ ಫಾರೆಸ್ಟ್ ಭೂಮಿ ಎಂದು ಹೇಳುತ್ತಿದ್ದಾರೆ. ಅದು ಫಾರೆಸ್ಟ್

ಭೂಮಿ ಇರಲಿ, ದೇವೇಂದ್ರನ ಭೂಮಿ ಇರಲಿ, ಅದನ್ನು ರಿಲೀಜ್ ಮಾಡಿ ಅವರನ್ನು ರಿಹ್ಯಾಬಿಲಿಟೇಟ್ ಮಾಡಬೇಕು ಅವರು 3 ವರ್ಷಗಳಿಂದ ನಮ್ಮನೆ ಕುಳಿತುಕೊಂಡಿದ್ದಾರೆ. ಅದ್ದರಿಂದ ಅವರಿಗೆ ಬೆಳೆ ಕಾಂಪೆನ್‌ಸೇಷನ್ ತಕ್ಷಣ ಕೊಡಬೇಕು, ಅವರಿಗೆ ಪುನರ್ ವಸತಿಯಿಲ್ಲ, ಪುನರ್ ವ್ಯವಸ್ಥೆ ಮಾಡಬೇಕು, ಅದ್ದರಿಂದ ಅವರಿಗೆ ತಕ್ಷಣ ಅದನ್ನು ಮಾಡಿಕೊಡುತ್ತೀರಾ!

ಶ್ರೀ ಕಾಗೋಡು ತಿಮ್ಮಪ್ಪ.— ಅಧ್ಯಕ್ಷರೇ ಬೆಳೆ ಪರಿಹಾರವನ್ನು ಕೊಡತಕ್ಕ ಸಂದರ್ಭದಲ್ಲಿ ನಿರ್ಧಿಷ್ಟವಾದ ಒಂದು ನೀತಿಯನ್ನು ಅನುಸರಿಸಬೇಕು. ಯಾರ ಜಮೀನಿನಲ್ಲಿ ಅಡಿಕೆ ಬೆಳೆ ಇತ್ತು ಮತ್ತು ಯಾರ ಜಮೀನಲ್ಲಿ ಭತ್ತ ಇತ್ತು ಮತ್ತು ಇತರೇ ಬೆಳೆ ಇತ್ತು ಎಂಬುದನ್ನು ನೋಡಿಕೊಂಡು ಆ ಬೆಳೆಯು ಉತ್ಪತ್ತಿ ಎಷ್ಟಾಗುತ್ತಿತ್ತು, ಅಷ್ಟೇ ಪ್ರಮಾಣದ ಫಸಲು ಪರಿಹಾರವನ್ನು ಅವರಿಗೆ ಕೊಡಬೇಕು ಅದನ್ನು ಮಾಡಲ್ಲಲ್ಲ. ಈ ಕುಟುಂಬದವರು ಫಸಲನ್ನು ಕಳೆದುಕೊಂಡಿರುವುದರಿಂದ ಅವರಿಗೆ ಪರಿಹಾರವನ್ನು ತರೀ ಜಮೀನಿಗೆ ಒಂದು ಎಕರೆಗೆ 150-200 ರೂಪಾಯಿಗಳ ಪರಿಹಾರವನ್ನು ಭಾಗಾಯಿತು ಆಗಿದ್ದರೆ ಒಂದು ಎಕರೆಗೆ 400-500 ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಹಣದಲ್ಲಿ ಅವರು ಹೇಗೆ ಬದುಕಬೇಕು. ಅವರು ಬೇರೆ ಕಡೆ ಜಮೀನು ತೆಗೆದುಕೊಂಡು ಹೇಗೆ ಜೀವನ ಮಾಡಬೇಕು. ಅದ್ದರಿಂದ ಒಂದು ವೇಳೆ ಅವಾರ್ಡ್ ಮಾಡಿ ಜಮೀನು ಕೊಡತಕ್ಕಂಥಾದ್ದು ತಡ ಆದರೆ ಅವರಿಗೆ ಇಂಟ್ರೀಮ್ ಪರಿಹಾರ ಕೊಡುವಂತೆ ಮಾಡಬೇಕು. ಫಸಲು ಪರಿಹಾರಕೊಡತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಎನ್ ಹುಚ್ಚಮಾಸ್ತಿಗೌಡ — ಈ ಫಸಲು ಪರಿಹಾರವನ್ನು ಕೊಡಬೇಕಾದರೆ ಆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಆ ಜಮೀನಿನಲ್ಲಿ ಯಾವ ಬೆಳೆ ಇರುತ್ತದೆಯೋ ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ಅದರ ಪ್ರಕಾರ ಕೊಡುತ್ತೇವೆ. ಕಾಂಪೆನ್‌ಸೇಷನ್ ಕೊಡುವವರೆಗೆ ಬಡ್ಡಿಯನ್ನು ಕೊಡತಕ್ಕ ವಿಧಾನ ಇವೆ. ಶ್ರೀಮಾನ್ ಲಿಂಗಪ್ಪನವರು ಪರಿಹಾರವನ್ನು ಕೊಡಿ ಎಂದು ಹೇಳುತ್ತಾರೆ ಶ್ರೀಮಾನ್ ತಿಮ್ಮಪ್ಪನವರು ಪ್ರೊಪೆಸ್ ಮಾಡಿದ್ದಾರೆ ಒಂದು ಎಕರೆಗೆ 400 ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸತ್ಯ ಅವರಿಗೆ ಪರಿಹಾರವನ್ನು ಕೊಟ್ಟಿಲ್ಲವೇ ಹೇಗೆ ಎನ್ನತಕ್ಕ ಬಗ್ಗೆ ಪೂರ್ಣವಾಗಿ ವಿವರಗಳನ್ನು ತರಿಸಿಕೊಂಡು ಅದಕ್ಕೆ ಕೂಡಲೇ ಪರಿಹಾರವನ್ನು ಕೊಡತಕ್ಕ ಕ್ರಮವನ್ನು ಕೈಗೊಳ್ಳುತ್ತೇನೆ, ಅದರ ಜೊತೆಗೆ ಅವರಿಗೆ ಜಾಗ ಕೊಟ್ಟಿಲ್ಲ ಎಂದು ಅವರಿಗೆ ಭೂಮಿಯನ್ನು ತೋರಿಸಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಉಪಯೋಗಿಸಿದ ಪದದಲ್ಲಿ ನನಗೆ ಸ್ವಲ್ಪ ಅನುಮಾನ ಇದೆ ಅರ್ ಬೀಯಿಂಗ್ ಗಿವನ್ ಎಂದು ಹೇಳಿದ್ದಾರೆ ಅದ್ದರಿಂದ ಇದರ ಬಗ್ಗೆ ಕ್ಷಮಿಸಬೇಕು. ಇದು ನನ್ನ ಗಮನಕ್ಕೆ ಬಂದಿಲ್ಲ. ಇದು ನನ್ನ ಗಮನಕ್ಕೆ ಬಂದ್ದಿದ ಕೂಡಲೇ ಡೆಪ್ಯುಟಿ ಕಮೀಷನರಿಗೆ ಫೋನ್ ಮಾಡಿ ಇರತಕ್ಕ ಪರಿಸ್ಥಿತಿಯನ್ನು ಈ ಸಭೆಗೆ ಹೇಳತಕ್ಕುದ್ದು ನನ್ನ ಪದ್ಧತಿ ಅದರಿಂದ ಈ ಕೂಡಲೇ ನಾನು ಡೆಪ್ಯುಟಿ ಕಮೀಷನರಿಗೆ ಫೋನ್ ಮಾಡಿ ವಿಷಯ ತಿಳಿದು ಅವರಿಗೆ ಜಮೀನು ದೊರಕಿಲ್ಲದಿದ್ದರೆ ಆ ಜಮೀನನ್ನು ಫೋರ್ಡ್ ಮಾಡಿ ಅವರಿಗೆ ಜಮೀನು ಕೊಡತಕ್ಕ ವ್ಯವಸ್ಥೆ ಮಾಡುತ್ತೇನೆ ಅದು ಫಾರೆಸ್ಟ್ ಭೂಮಿಯೇ ಇರಲಿ ಅಥವಾ ಬೇರೆ ಯಾವುದೇ ಜಮೀನು ಇರಲಿ ಅದನ್ನು ಬಿಡುಗಡೆ ಮಾಡಿಕೊಂಡು ಅದನ್ನು ಆ ರೈತರಿಗೆ ಕೊಡುವ ವ್ಯವಸ್ಥೆ ಮಾಡುತ್ತೇನೆ ಎಂದು ನಾನು ಈ ಸಭೆಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ—ಒಂದು ಮಾತನ್ನು ಮಾನ್ಯ ಸಚಿವರು ನಕ್ಕಾಪಕ್ಕಿಯಾಗಿ ಹೇಳಿದ್ದಾರೆ. ಕಾಂಪನ್‌ಸೇಷನ್ ಆಲ್‌ಟೀಯಿಂಗ್ ಗಿವನ್ ಎಂದು ಹೇಳಿದ್ದಾರೆ. ಆದ್ದರಿಂದ ಅವಷ್ಟು ಭಾಗವನ್ನು ಆ ರೈತರನ್ನು ರೀಪ್ರಾಪರ್ಟಿಲೈಜೇಷ್ ಮಾಡುವುದಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ಮಳೆಗಾಲ ಬಂದಿದೆ. ಅದ್ದರಿಂದ ಅವರಿಗೆ ಮನೆಗಳನ್ನು ಕಟ್ಟಿಕೊಟ್ಟರೆ ಅವರು ಅಲ್ಲಿ ಬೆಳೆಯನ್ನು ಬೆಳೆದುಕೊಂಡು ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ ಅವಷ್ಟು ಭಾಗವಾದರೂ ಇದಕ್ಕೆ ಸರ್ಕಾರದವರು ಹೆಚ್ಚು ಗಮನ ಕೊಟ್ಟು ಶೀಘ್ರಗತಿಯಲ್ಲಿ ಈ ಕೆಲಸವನ್ನು ಮಾಡಬೇಕು. ಈ ತಿಂಗಳೊಳಗಾಗಿ ಮಾಡಿದರೆ ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ,— ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರೋ ಅಥವಾ ಶ್ರೀಮಾನ್ ಕೊಣಂದೂರು ಲಿಂಗಪ್ಪನವರೋ ಈ ಸಭೆಯ ಮಾನ್ಯ ಸದಸ್ಯರೊಬ್ಬರು ಸದಸ್ಯರಾಗಿ

ದ್ದಾರೆ. ಆದ್ದರಿಂದ ಅವರು ಈ ಕೂಡಲೇ ಸಮಿತಿಯನ್ನು ಸಭೆಯನ್ನು ಸೇರಿಸಿ ಕೆಲವು ಶಿಫಾರಸ್ಸುಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಕೂಡಲೇ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ನಾನು ಈ ಸಭೆಗೆ ಆಶ್ವಾಸನೆ ಕೊಡುತ್ತೇನೆ.

Matters under Rule 312

(i) *re. Malpractices in the Public Libraries Department*

† ಶ್ರೀ ಕೋಣಂದೂರುಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ನಾನು ನಿನ್ನೆ ಈ ವಿಷಯದಲ್ಲಿ ಈಗಾಗಲೇ ತಿಳಿಸಿದ್ದೇನೆ. ಸಮ್ಮ ರಾಜ್ಯದ ಕೇಂದ್ರ ಗ್ರಂಥಾಲಯ ಏನಿದೆ ಇದರಲ್ಲಿ ನಡೆಯತಕ್ಕ ಅವ್ಯವಹಾರಗಳನ್ನು ನಾನು ಕಳೆದ ೨ ವರ್ಷಗಳಿಂದ ಸತತವಾಗಿ ಹೇಳುತ್ತಿದ್ದೇನೆ. ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ರಾಜ್ಯದ ಕೇಂದ್ರ ಗ್ರಂಥಾಲಯದಲ್ಲಿ ನಡೆಯತಕ್ಕ ಅವ್ಯವಹಾರಗಳನ್ನು ಹೇಳುತ್ತಾ ಹೋದರೆ ಕನಿಷ್ಟಪಕ್ಷ ನನಗೆ ಒಂದು ದಿನದ ಮಾನ್ಯ ಅಧ್ಯಕ್ಷರು ಯವರು ಅವಕಾಶ ಕೊಡಬೇಕಾಗುತ್ತದೆ. ಆದಕ್ಕೆ ಕಾರಣ ಇಷ್ಟೆ.

ಅಧ್ಯಕ್ಷರು.—ಆ ರೀತಿ ಅವಕಾಶವನ್ನು ಕೊಡುವುದಿಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಇದರಲ್ಲಿರತಕ್ಕ ಮುಖ್ಯ ಕಾರಣಗಳು ಏನೆಂದರೆ ಕೇಂದ್ರದ ಪುಸ್ತಕ ಭಂಡಾರದಲ್ಲಿ ಮುಖ್ಯಸ್ಥರೇನಿದ್ದಾರೆ ಇವರು ಕೃತಕವಾಗಿ ಕೆಲವರ ಹೆಸರಿನಲ್ಲಿ ಕೆಲವು ಇನ್‌ಸ್ಟಿಟ್ಯೂಷನ್‌ಗಳನ್ನು ಸೃಷ್ಟಿಮಾಡಿ ಪುಸ್ತಕಗಳನ್ನು ಕೊಳ್ಳತಕ್ಕ ವ್ಯವಸ್ಥೆ ಮಾಡಿ ಒಂದು ಕೋಟಿ 64 ಲಕ್ಷ ರೂಪಾಯಿಗಳ ಪುಸ್ತಕಗಳನ್ನು ಕೆಲವು ಕಾಲ್ಪನಿಕ ಸಂಸ್ಥೆಗಳ ಹೆಸರಿನಲ್ಲಿ ಕೊಟ್ಟಿದ್ದಾರೆ. ಅದೂ ಅಲ್ಲದೆ ಈ ಇರಾಪಯಿಲ್ಲಿ ಎಂದರೆ ಪಬ್ಲಿಕ್ ಲೈಬ್ರರಿ ಡಿಪಾರ್ಟ್‌ಮೆಂಟಿನಲ್ಲಿ ಅಪಾಯಿಂಟ್‌ಮೆಂಟ್ ಮಾಡಿರುವುದು ಮೂಲತಃ ಸರಿಯಿಲ್ಲ. ಇದರ ಬಗ್ಗೆ ಒಂದು ದೊಡ್ಡ ಕಥೆ ಇದೆ. ಅವರಿಗೆ ಬೇಕಾದಂತಹ ಕ್ವಾಲಿಫಿಕೇಷನ್ ಇಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಕೆಲವರು 31-1-1973 ರಲ್ಲಿ ಹೈಕೋರ್ಟಿಗೆ ರಿಟ್ ಹಾಕಿದ್ದರು. ಆಲ್ಲಿ ಹೈಕೋರ್ಟಿನಲ್ಲಿ ಜಡ್ಜ್ ಏನು ಜಡ್‌ಮೆಂಟ್ ಕೊಟ್ಟಿದ್ದಾರೆ ಎಂದರೆ ಇದು ಟೆಂಪರರಿ ಡಿಪಾರ್ಟ್‌ಮೆಂಟ್ ಆಗಿದ್ದರೂ ಕೂಡ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಬೇಕು, ಅರ್ಹರಾಗಿದ್ದವರಿಗೆ ಅಪಾಯಿಂಟ್‌ಮೆಂಟ್ ಮಾಡಬೇಕು ಎಂದು ಆದೇಶ ಕೊಟ್ಟಿದ್ದಾರೆ.

ಆ ಮೇಲೆ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ಆಯ್ಕೆ ಸಮಿತಿ ಎಂದು ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನವರ್ಯಾಗಲೀ ವಿಶ್ವವಿದ್ಯಾನಿಲಯದವರ್ಯಾಗಲೀ ಸಾಹಿತ್ಯದ ಬಗ್ಗೆ ಪರಿಚಯ ಇರತಕ್ಕವರು ಮತ್ತು ಪ್ರಾಜ್ಞರನ್ನು ಈ ಸಮಿತಿಯಲ್ಲಿ ನೇಮಕ ಮಾಡುತ್ತಾರೆ. ಅಂಥವರು ಇದರಲ್ಲಿ ಯಾರೂ ಇಲ್ಲ. ಈ ಪಬ್ಲಿಕ್ ಲೈಬ್ರರಿ ಡಿಪಾರ್ಟ್‌ಮೆಂಟಿನಲ್ಲಿ ಮಾಡಿರತಕ್ಕ ಅಪಾಯಿಂಟ್‌ಮೆಂಟ್‌ಗಳು, ಪುಸ್ತಕಗಳನ್ನು ಕೊಂಡುಕೊಳ್ಳುವಾಗ ನಡೆದಿರತಕ್ಕ ಅವ್ಯವಹಾರಗಳ ಬಗ್ಗೆ ತಾ. 18-4-77ರಲ್ಲಿ ಕನ್ನಡಪ್ರಭಾ ಪತ್ರಿಕೆಯಲ್ಲಿ ಬಂದಿದೆ. ಆದರಿಂದ ಈ ಡಿಪಾರ್ಟ್‌ಮೆಂಟಿನಲ್ಲಿ ಮಾಡಿರತಕ್ಕ ನೇಮಕಾತಿಗಳು ಮತ್ತು ಇತರ ವ್ಯವಹಾರಗಳ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಿದರೆ ತಮಗೆ ಎಲ್ಲಾ ವಿಷಯವೂ ಅಮೂಲಾಗ್ರವಾಗಿ ಗೊತ್ತಾಗುತ್ತದೆ. ಇಲ್ಲಿ ನೇಮಕಾತಿಗಳನ್ನು ಯಾರಿಗೆ ಮಾಡುತ್ತಾರೆ ಎಂದರೆ ಕೇವಲ ಅವರು ಹೇಳಿದಹಾಗೆ ಕೇಳಿಕೊಂಡು ಇರತಕ್ಕವರಿಗೆ ಅವರ ಸಂಬಂಧೀಕರಿಗೆ ಅವರ ಕೋಮಿನವರಿಗೆ ಮಾತ್ರ ಇಲ್ಲಿ ಅಪಾಯಿಂಟ್‌ಮೆಂಟ್‌ಗಳನ್ನು ಕೊಡುತ್ತಿದ್ದಾರೆ. ಈ ಬಗ್ಗೆ ಅವರ ಮೇಲೆ ಒಂದು ದೊಡ್ಡ ಆರೋಪಣೆ ಇದೆ. ಬೇರೆ ಯಾರಾದರೂ ಅಲ್ಲಿರತಕ್ಕವರು ಹೊರ್ತೆತಿದರೆ ಅವರನ್ನು ತಕ್ಷಣ ಹೊರಗೆ ಹಾಕುತ್ತಾರೆ. ಈಗ 3-4 ವರ್ಷಗಳಿಂದ ಕೆಲಸ ಮಾಡತಕ್ಕವರನ್ನು ಖಾಯಂ ಮಾಡಿಲ್ಲ. ಯಾರಾದರೂ ಚಕಾರ ಶಬ್ದ ಎತ್ತಿದರೆ ಅವರನ್ನು ಹೊರಕ್ಕೆ ದಬ್ಬುತಕ್ಕ ಪರಿಸ್ಥಿತಿ ಇದೆ. ಈ ಡಿಪಾರ್ಟ್‌ಮೆಂಟಿನಲ್ಲಿ ದಬ್ಬಾಳಿಕೆ, ದೌರ್ಜನ್ಯ ಇತ್ಯಾದಿಗಳೆಲ್ಲಾ ನಡೆದಿದೆ. ಜೊತೆಗೆ ದೇಶಕ್ಕೆ ರಾಜ್ಯಕ್ಕೆ ಉಪಯುಕ್ತವಾದ ಬೇಕಾದ ಗ್ರಂಥಗಳನ್ನು ಬಿಟ್ಟು ಯಾರೋ ಒಬ್ಬರು ಬರೆದಿರುವ ಗ್ರಂಥವನ್ನು 10 ರೂಪಾಯಿ ಬೆಲೆ ಬಾಳುವ ಗ್ರಂಥಕ್ಕೆ 50 ರೂಪಾಯಿಗಳನ್ನು ಕೊಟ್ಟು ವಶೀಲಿಬಾಜಿ ಮಾಡುತ್ತಿದಾರೆ. ಸಾಮಿರಾರು ಪ್ರತ್ಯಕ